

ತಿರುಪತಿ ತಿಮ್ಮಪ್ಪ ಮಹಾನುಭಾವ ಇನ್‌ಕಮ್ ಟ್ಯಾಕ್ಸ್ ಕಟ್ಟ್ಯಾನೋ ಇಲ್ಲವೋ ಯಾರಿಗೆ ಗೊತ್ತದ. ಯಾಕಂದರ ಅವನೇ ಟ್ಯಾಕ್ಸ್ ಹಾಕೋ ಜನಕೇ ಸಾಲ ಕೊಟ್ಟು ಕುಳಿತವನೇ. ‘ಏಳು ಕೋಟಿಗೋ... ಚಾಂಗಬಲೋ.... ಚಾಂಗಬಲೋ...’ ಅನ್ನುವ ಹಾಗೆ ಆಗಬಾರದು ನಮ್ಮ ಪರಿಸ್ಥಿತಿ ಹೌದಲ್ವಾ. ಸ್ವಗತದಲ್ಲಿ ನುಡಿದಳು ಮಾರೆಮ್ಮ.

ಅದಕ ಎಲ್ಲಾ ಆನ್‌ಲೈನ್ ಶುದ್ಧ ವ್ಯವಹಾರ, ಪಾರದರ್ಶಕವಾಗಿರೋದ. ನಾನು ಮೊದಲೇ ಸತ್ಯವತಿ ಅದೀನಿ, ಇನ್ನು ಡಿಜಿಟಲ್ ಸತ್ಯವತಿ ಆಗ್ತಿನಿ. ಹೇಗೆ ಸ್ಮಾರ್ಟ್ ಆಗ್ತೇನಿ ನೋಡ್ತಾ ಇರೀ.... ನನ್ನ ಉಡುಗೆ ತೊಡುಗೆ, ಶರೀರ ಅವಯವಗಳೇ ಬದಲಾಗಿ ಸುಂದರವಾಗಿ ಕಂಗೊಳಿಸ್ತೀನಿ. ಮತ್ತ ನೀವು ನನಗ ಎಐ ಪ್ರಭಾವ ಅನಬೇಡಿ. ಸಿದ್ರಾಮಣ್ಣ ಒಮ್ಮೆ ಹಾಕೊಂಡಿದ್ನಲ್ಲ ವಜ್ರಖಚಿತ ವಾಚ್ ಹೊಳದಂಗ ಹೊಳಿತೀನಿ. ಆ ಟೈಟಾನಿಕ್ ಹಿರೋಯಿನ್ ಇದ್ದಳಲ್ಲ ಹಂಗಾ ಆಗ್ತಿನಿ ಅಂತಾ ನಮ್ಮ ಹಳೇ ಊರಿನ ಮಾರೆಮ್ಮ